REVIEW OF LITERATURE
ISSN: 2347-2723
IMPACT FACTOR : 2.0260(UIF)
VOLUME - 4 | ISSUE - 8 | MARCH – 2017

# ‘ಅಲ್ಲಮಪ್ರಭುದೇವರ ದೃಷ್ಟಿಯಲ್ಲಿ ಸಾಮಾಜಿಕ ನೆಲೆಗಳು’

**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
**ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ .**

ಜಗದ್ಭರಿತ ಜಂಗಮನಾದ ಅಲ್ಲಮಪ್ರಭುಗಳು ಸತ್ಯ, ನ್ಯಾಯ, ನೀತಿ, ನಡೆ–ನುಡಿ, ಸಿದ್ಧಾಂತಗಳ ಅಡಿಯಲ್ಲಿ ಮುನ್ನಡೆದವರು. ಇಡೀ ಜಗತ್ತಿನ ಅನುಭಾವ ಸಾಹಿತ್ಯಕ್ಕೆ, ಅಡಿಯಾದ ಅಲ್ಲಮಪ್ರಭುಗಳು ಹುಟ್ಟಿದ್ದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ “ಬಳ್ಳಿಗಾವೆ”ಯಲ್ಲಿ. ಅಲ್ಲಿಯೇ ವಿದ್ಯೆ ಪಡೆದು ಕಾಮಲತೆಯೊಂದಿಗೆ ವಿವಾಹವಾಗಿ ಕೆಲವು ದಿನ ಅಲ್ಲಿಯೇ ನೆಲೆಸಿದ್ದರೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಈ ಬಳ್ಳಿಗಾವೆ ಹಿಂದಿನ ಬನವಾಸಿ ನಗರವಾಗಿತ್ತು ಎಂಬುದನ್ನು ಮರೆಯುವಂತಿಲ್ಲ. ಪಂಪ ಮತ್ತು ಚಾಮರಸ ಕವಿಗಳು ಈ ಬನ್ವಾಸಿಯ ವರ್ಣನೆ ಮಾಡಿದ್ದಾರೆ. ಅಲ್ಲಮನ ಜೀವನದ ಕುರಿತು ಹತ್ತು ಹಲವಾರು ಗ್ರಂಥಗಳು ದೊರೆಯುತ್ತವೆ.

ಶಿವಭಕ್ತನಾದ ಹರಿಹರ ಕವಿಯ ‘ಪ್ರಭುದೇವರ ರಗಳೆ’ ‘ಚಾಮರಸನ ಪ್ರಭುಲಿಂಗಲೀಲೆ’ ಎಳಂದೂರ ಹರೀಶ್ವರನ ‘ಪ್ರಭುದೇವರ ಪುರಾಣ’ ಈ ಕೃತಿಗಳು ಅಲ್ಲಮಪ್ರಭುದೇವರನ್ನು ಕೇಂದ್ರವಾಗಿಟ್ಟುಕೊಂಡು ಕಥೆಯ ನಾಯಕನಂತೆ ಚಿತ್ರಿಸಿವೆ. ರಾಘವಾಂಕನ ‘ಸಿದ್ಧರಾಮ ಚರಿತೆ’, ಭೀಮಕವಿಯ



‘ಬಸವಪುರಾಣ’, ಲಕ್ಕಣ ದಂಡೇಶನ ‘ಶಿವತತ್ವ ಚಿಂತಾಮಣಿ’, ಸಿಂಗಿರಾಜನ ‘ಸಿಂಗಿರಾಜ ಪುರಾಣ ಅಥವಾ ‘ಅಮಲ ಬಸವ ಚಾರಿತ್ರ’ ಷಡಕ್ಷರ ಕವಿಯ ‘ವೃಷಭೇಂದ್ರ ವಿಜಯ’ ಮೊದಲಾದ ಕಾವ್ಯಗಳಲ್ಲಿ ಪ್ರಾಸಂಗಿಕವಾಗಿ ಅಲ್ಲಮಪ್ರಭುಗಳ ಜೀವನದ ಕುರಿತು ಹೇಳುತ್ತವೆ.

ಅಲ್ಲಮಪ್ರಭುಗಳು ತಮ್ಮ ವಚಗಳ ಅಥವಾ ಬೆಡಗಿನ ವಚನಗಳ ಮೂಲಕ ರಾಷ್ಟ್ರದ ಉನ್ನತಿಗೆ ಮತ್ತು ಜನ ನಡೆ–ನುಡಿ ಮನಸ್ಸನ್ನು ಶುಚಿಗೊಳಿಸುವ ಮತ್ತು ಅಧಮ ನಡೆ–ನುಡಿಗಳಿಂದಾಗುವ ಅನಾಹುತಗಳನ್ನು ಸ್ಪಷ್ಟ ಪಡಿಸಿರುವರು. ಸಮಾಜದ ಮುಖ್ಯ ಸಮಸ್ಯೆಗಳಾದ ಬಡತನ, ಮೂಢನಂಬಿಕೆ, ಏಕದೇವೋಪಾಸನೆ, ದೇವರ್ ಪರಿಕಲ್ಪನೆಗಳು, ಹೀಗೆ ಒಂದಲ್ಲ ಎರಡಲ್ಲ ಸಾವಿರಾರು ಭಿನ್ನಾಭಿಪ್ರಾಯಗಳ ಸಹಸ್ರಾರು ಅಸಂಖ್ಯಾತ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ತಮ್ಮ ವಚನ ಮತ್ತು ಬೆಡಗಿನ ವಚನಗಳಲ್ಲಿ ತಿಳಿಸಿರುವರು.

ಸಾಮಾಜಿಕ ಸಾಮರಸ್ಯದ ಪ್ರಮುಖ ಅಂಶಗಳಲ್ಲಿ ಸಂಸಾರವು ಒಂದು, ಅಲ್ಲಮಪ್ರಭುಗಳು ಸಂಸಾರವನ್ನು ತಿರಸ್ಕರಿಸಲಿಲ್ಲ ತಮ್ಮ ತನುವನ್ನೇ ಸಂಸಾರವೆಂದು ಅರಿತು ಬಾಳಿದವರು. ಸಂಸಾರವನ್ನು ಹುಟ್ಟು–ಸಾವುಗಳ ಭವಕ್ಕೆ ಹೋಲಿಸಲಾಗಿದೆ. ತನುವಿನ ಒಂದು ಸಂಸಾರ ರೂಪವಷ್ಟೇ. ಏಳು ಜನ್ಮ ಸಂಸಾರದ ಬಂಧನ ಇನ್ನೆಷ್ಟು? ಎಂದು ಪ್ರಶ್ನೆ ಮಾಡುತ್ತ ಪ್ರಸ್ತುತ ಜನ್ಮದ ಸಂಸಾರವನ್ನೇ ಗೆದ್ದವರು.

“ಸಂಸಾರವೆಂಬ ಹೆಣಬಿದ್ದಿರೆ ತಿನಬಂದ ನಾಯ ಜಗಳವ ನೋಡಿರೇ
ನಾಯ ಜಗಳವ ನೋಡಿ ಹೆಣನೆದ್ದು ನಗುತ್ತಿದೆ.
ಗುಹೇಶ್ವರನೆಂಬ ಲಿಂಗದಲ್ಲಿಲ್ಲ ಕಾಣಿರೆ!” 1

‘ಸಂಸಾರ’ವೆಂಬ ಸಾಗರದೊಳಗೆ ಸುಖ ದುಃಖಗಳು ಸಾಮಾನ್ಯವಾಗಿದೆ. ಶಿವಮೂರ್ತಿ ಪ್ರಳವಾಯಿತ್ತು ಗುಹೇಶ್ವರ ಎಂದು ಮನುಷ್ಯ ತನ್ನತನ ಮರೆತು ಸರ್ವನಾಶಕ್ಕೆ ಗುರಿಯಾಗುತ್ತಾನೆ. ‘ಮಾಂಸವಲ್ಲವೇನು ಸಂಸಾರ ಸಂಗ? ಎಂದು ಪ್ರಶ್ನಿಸುತ್ತಾರೆ. ತನ್ನನ್ನು ತಾನು ಮರೆತ ಮಾನವನ ಸ್ಥಿತಿಯನ್ನು ‘ಹೆಣ’ ಎಂದು ಸಂಬೋಧಿಸಲಾಗಿದೆ. ಆದರೆ ಇಂತಹ ‘ಹೆಣ’ವಾದ ಸಂಸಾರಕ್ಕಾಗಿಯೇ ಮನುಷ್ಯರು ಪರಸ್ಪರ ಜಗಳವಾಡುತ್ತಾರೆ. ಇಂತಹ ಸಂಸಾರಕ್ಕಾಗಿ ಜಗಳವಾಡುವ ಜನರನ್ನು ‘ನಾಯಿ’ ಎಂಬ ಪ್ರಾಣಿಗೆ

ಹೋಲಿಸಲಾಗಿದೆ. ಇಂತಹ ಘಟನೆಯನ್ನು ಕಂಡು ಜಡಗೊಂಡ ಸಂಸಾರವೇ ಎದ್ದು ನಗುತ್ತಿದೆ. ವಾದ–ವಿವಾದ ಮಾಡುವ ಸಂಸಾರಿಗಳ ಮಧ್ಯ ಪರಮಾತ್ಮ (ಗುಹೇಶ್ವರ)ನಿರಲು ಸಾಧ್ಯವಿಲ್ಲ.

ಈ ವಚನದ ತಾತ್ಪರ್ಯವಿಟ್ಟೆ ಮನುಷ್ಯ ಮತ್ತು ಮನುಷ್ಯರ ಮಧ್ಯೆ ವೈಷಮ್ಯವಿರಬಾರದು; ದ್ವೇಷ ಅಸೂಯೆ ಬಿಟ್ಟು ಸರಳ ನಡೆ–ನುಡಿ ಮತ್ತು ಭಕ್ತಿಯಿಂದ ಶಿವ ಧ್ಯಾನವನನು ಮಾಡಿದಾಗ, ಶಿವನ ಬಗ್ಗೆ ಕೆಟ್ಟ ನಂಬಿಕೆ ಇರುವಾಗ ಅಥವಾ ಮಹತ್ತರ ಗುಣಗಳು ಇಲ್ಲದಿದ್ದಾಗ ಅಲ್ಲಿ ಗುಹೇಶ್ವರ ಲಿಂಗ ನೆಲೆಸಲು ಸಾದ್ಯವಿಲ್ಲ. ಇಂತಹ ತಾತ್ವಿಕವಾದ ವಿಚಾರಗಳು ಅಲ್ಲಮಪ್ರಭುಗಳು ಬಿತ್ತರಿಸುತ್ತಾರೆ. ಸಾಮಾಜಿಕ ಸಾಮರಸ್ಯದಿಂದ ಮೇಲು–ಕೀಳು ಎನ್ನದೆ ಜನ ಬದುಕಬೇಕು ಎನ್ನುವ ಆಶಯ ಹೊಂದಿದವರಾಗಿದ್ದಾರೆ. ಭಕ್ತನಾದವನು ಗುರುವನ್ನು ನಂಬಿ ನಡೆದುಕೊಳ್ಳಬೇಕು, ಎಲ್ಲೋ ಇರುವ ದೇವರನ್ನು ತನ್ನ ಭಕ್ತಿಯೆಂಬ ಅಸ್ತ್ರದಿಂದ ಹೇಗೆ ಪಡೆದುಕೊಳ್ಳುತ್ತೇವೆ. ಆತ ಲಿಂಗಕ್ಕೂ ತನಗೂ ಯಾವ ರೀತಿ ಸಂಬಂಧವಿದೆ, ದೇವರು ಎಲ್ಲಿಯೂ ಇರುವವನು, ನಾನು ಎಲ್ಲಿಯೂ ಇರುವವನು ಆದರೂ ತನಗೂ ಶಿವನಿಗೂ ಅವಿನೋಭಾವ ಸಂಬಂಧವಿದೆ ಎಂದು ಈ ವಚನದ ಮೂಲಕ ಹೇಳುತ್ತಾರೆ.

"ಎತ್ತಣ ಮಾಮರ? ಎತ್ತಣ ಕೋಗಿಲೆ?
ಎತ್ತಣಿಂದೆತ್ತ ಸಂಬಂಧವಯ್ಯ
ಬೆಟ್ಟದ ನೆಲ್ಲಿಕಾಯಿ ಸಮುದ್ರದೊಳಗಣ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯ
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯ 2

ಎಲ್ಲೋ ಕಾಡಿನಲ್ಲಿ ಬೆಳೆದ ಮಾಮರಕ್ಕೂ ಕೋಗಿಲೆಗೂ ಹೇಗೆ ಸಂಬಂಧವಿದೆಯೋ ಆ ಮಾವಿನ ಚಿಗುರನ್ನು ತಿಂದು ಕೋಗಿಲೆ ಇಂಪಾಗಿ ಹಾಡುತ್ತದೆ. ಅದೇ ರೀತಿ ಬೆಟ್ಟದಲ್ಲಿ ಇರುವ ನೆಲ್ಲಿಕಾಯಿ ಹಾಗೂ ಸಮುದ್ರದಲ್ಲಿ ಸಿಗುವ ಉಪ್ಪಿಗೂ ಹೇಗೆ ಸಂಬಂಧವಿದೆಯೋ ಅವುಗಳ ಮಿಶ್ರಣದಿಂದ ಹುಟ್ಟುವ ರುಚಿಕರವಾದ

1. **ಕೆ.ಕೊಪ್ಪಾ (ಸಂ.) ಅಲ್ಲಮಪ್ರಭು– ಚಿಂತನ: ಪುಟ ಸಂಖ್ಯೆ–9.**
2. **ಶ್ರೀ ಅನ್ನದಾನೇಶ್ವರ ಮಹಾಶಿವಯೋಗಿಗಳು:ಅಲ್ಲಮಪ್ರಭುದೇವರು:ಪುಟ ಸಂಖ್ಯೆ–67**

ಉಪ್ಪಿನಕಾಯಿಗೂ ಹೇಗೆ ಸಂಬಂಧವಿದೆಯೋ ಶಿವ ಮತ್ತು ನಾನು ದೂರದ ಸಂಬಂಧವಿರದಂತೆ ಗೋಚರಿಸಿದರೂ, ನಮ್ಮಿಬ್ಬರಿಗೂ ಅವಿನೋಭಾವ ಸಂಬಂಧವಿದೆ. ಮಾಮರ ಮತ್ತು ಕೋಗಿಲೆಗೆ, ಹಾಗೂ ನೆಲ್ಲಿಕಾಯಿಗೆ ಮತ್ತು ಉಪ್ಪಿಗೆ ಸಂಬಂಧವಿರುವಂತೆ, ನನಗೂ ಗುಹೇಶ್ವರ ಲಿಂಗಕ್ಕೂ ಅಂತರಂಗದ ಸಂಬಂಧವಿದೆ ಎಂದು ಹೇಳುತ್ತಾರೆ.

ಆಸೆ ಆಮಿಷಕ್ಕೊಳಗಾಗುವ ಜನರನ್ನು ಕುರಿತು.

"ಹೊನ್ನು ಮಾಯೆಯೆಂಬರು
ಹೆಣ್ಣು ಮಾಯೆಯೆಂಬರು
ಮಣ್ಣು ಮಾಯೆಯೆಂಬರು
ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ,
ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ
ಕಾಣಾ ಗುಹೇಶ್ವರಾ" 3

ಮನಸ್ಸಿನ ಚಂಚಲತೆಯ ಬಗ್ಗೆ ಹೇಳುತ್ತಾ, ಬಂಗಾರ ಬೆಳ್ಳಿ ಇವು ಮಾಯೆಯ ನಿದರ್ಶನ, ಮನುಷ್ಯನಾದವನು ಹೊನ್ನಿಗೊಸ್ಕರ ಕಳ್ಳತನ ಮಾಡಲು ಮುಂದಾಗುತ್ತಾನೆ. ಇನ್ನೊಬ್ಬರ ಮನ ನೋಯಿಸುತ್ತಾನೆ. ಹಣ ಗಳಿಸಲು ವಾಮಮಾರ್ಗ ಹಿಡಿಯುತ್ತಾನೆ. ನಮಗೆ ಮೋಕ್ಷಕ್ಕೆ ಹೋಗುವ ದಾರಿ ತಪ್ಪಿಸಬೇಕಾದರೆ, ಹೊನ್ನು, ಹೆಣ್ಣು, ಮಣ್ಣು, (ಬಂಗಾರ, ಸ್ತ್ರೀ, ಆಸ್ತಿ)ಗಳು ಎಂದು ನಾವು

ತಿಳಿದುಕೊಂಡಿದ್ದೇವೆ.ಆದರೆ ಇವು ಯಾವುವು ಅಲ್ಲ...! ನಮ್ಮ ಮನಸ್ಸಿನಲ್ಲಿರುವ ಆಸೆ, ದುರ್ಬಲ ಮನಸ್ಸುಗಳೇ, ಕಾರಣ ಗೌತಮಬುದ್ಧ ಕೂಡ ಆಸೆ ದುಃಖಕ್ಕೆ ಮೂಲ ಕಾರಣವೆಂದು ಹೇಳಿರುವ'ನು.

"ಕುಲದಧಿಕನು ಹೋಗಿ, ಹೋಲಗೇರಿಯಲ್ಲಿ ಮನೆಯ ಕಟ್ಟಿದರೆ
ಕುಲಗೆಡದೆ ಇಪ್ಪ ಪರಿಯ ನೋಡಾ
ಆತನ ಕುಲದವರೆಲ್ಲರು ಮುಖದ ನೋಡಲೊಲ್ಲದಿದ್ದಾರೆ
ಕುಲವುಳ್ಳವರೆಲ್ಲರು ಕೈವಿಡಿದರು
ಕುಲಗೆಟ್ಟವನೆಂದು ತಿಳಿದು ವಿಚಾರಿಸಲು, ಹೊಲೆಗೆಟ್ಟು
ಹೋಯಿತ್ತು ಕಾಣಾ ಗುಹೇಶ್ವರ" 4

3. **ಶ್ರೀ ಅನ್ನದಾನೇಶ್ವರ ಮಹಾಶಿವಯೋಗಿಗಳು:ಅಲ್ಲಮಪ್ರಭುದೇವರು:ಪುಟ ಸಂಖ್ಯೆ–66.**
4. **ಅ.ನ.ಕೃ.:ಅಲ್ಲಮಪ್ರಭು: ಪುಟ ಸಂಖ್ಯೆ–28.**

ಬಸವಣ್ಣನವರು ತಮ್ಮ ವಚನದಲ್ಲಿ ಕುಲವೇನು ಆವಂದಿರ ಕುಲವೇನು? ಇನ್ನೊಂದು ವಚನದಲ್ಲಿ ಹೊಲಸು ತಿಂಬುವವ ಹೊಲೆಯರೆಂದು ದಿಟ್ಟವಾಗಿಯೇ ಹೇಳಿರುವರು. ಜಾತಿ ಸಮಾಜದ ಒಂದು ಪಿಡುಗು, ಮಾರಕ ರೋಗವಾಗಿದೆ. 12ನೇ ಶತಮಾನದಲ್ಲಿ ಮೇಲು–ಕೀಳೆನ್ನುವ ಭಿನ್ನಾಭಿಪ್ರಾಯ ತೆಗೆದು ಹಾಕಬೇಕು ಎಂದು ಶರಣರು ತಮ್ಮ ವಚನಗಳ ಮೂಲಕ ನಿರೂಪಿಸಿದರು ಜೊತೆಗೆ ತಾವು ಸಹ ನುಡಿದು–ನಡೆದು ತೋರಿಸಿದರು. ಈ ಧರ್ಮ ಪ್ರಚಾರಕರು ತಮ್ಮ ಕರ್ತವ್ಯವನ್ನು ಮರೆತು ಸ್ವಪ್ರತಿಷ್ಠೆಯ ಪ್ರಸಾರಕ್ಕಾಗಿ ಉಪಯೋಗಿಸಿಕೊಳ್ಳಲಾರಂಭಿಸಿದರು. ಹೀಗಾಗಿಯೇ "ಆಚಾರಗಳ ಮೂಲ ಉದ್ದೇಶ ಮರೆತು ಮರೆಯಾಗಿ ಅವುಗಳ ಬಾಹ್ಯ ರೂಪ ಮಾತ್ರ ಕಾಣಿಸಿತು" ಎನ್ನುತ್ತಾರೆ ಅಲ್ಲಮಪ್ರಭುಗಳು.

ಗುರುಲಿಂಗ, ಜಂಗಮ, ಪಾದೋದಕ ಪ್ರಸಾದ, ಸಂಸಾರ, ದೇವರು, ಆತ್ಮಲಿಂಗ, ಸಮಾಜದಲ್ಲಿ ಬರುವ ಪ್ರಮುಖ ಅಂಶಗಳ ಬಗ್ಗೆ ತಮ್ಮ ವಚನಗಳಲ್ಲಿ ಚರ್ಚಿಸಿದ್ದಾರೆ. ಸಾಮಾಜಿಕ ಸಾಮರಸ್ಯ ಕಲ್ಪಿಸುವ ಕೊಂಡಿಯಾಗಿ ಹಲವರಿಗೆ, ಗುರು, ಲಿಂಗಗಳ ಬಗ್ಗೆ ಮತ್ತು ಅಹಂಕಾರವನ್ನು ಇಲ್ಲವಾಗಿಸುವ ಕುರಿತು ಮಾರ್ಗದರ್ಶನ ನೀಡಿರುವರು. ಮೋಕ್ಷಕ್ಕೆ ದಾರಿಮಾಡಿಕೊಟ್ಟ ಹಲವು ನಿದರ್ಶನಗಳು ಕಣ್ಣೆದುರಿಗಿವೆ.

**ಅಡಿ ಟಿಪ್ಪಣಿ :**


1. **ಎಸ್.ಕೆ. ಕೊಪ್ಪಾ (ಸಂ): ಅಲ್ಲಮಪ್ರಭು–ಚಿಂತನ:2004: ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.**
2. **ಶ್ರೀ ಅನ್ನದಾನೀಶ್ವರರು: ಅಲ್ಲಮಪ್ರಭು ದೇವರು: 2001: ಶ್ರೀ ಜಗದ್ಗುರು ಅನ್ನದಾನೀಶ್ವರ ಧರ್ಮ ಸಂಸ್ಕೃತಿ ಪ್ರಚಾರ ಮಂಡಳ ಮುಂಡರಗಿ: ಗದಗ**
3. **ಅ.ನ.ಕೃ: ಅಲ್ಲಮಪ್ರಭು: 1959: ಸಾಗರ ಪ್ರಕಾಶನ : ಬೆಂಗಳೂರು.**
4. **ಕೆ.ಎಸ್.ಗೋಪಾಲ: ಚಾಮರಸ ಕವಿಯ ಪ್ರಭುಲಿಂಗ ಲೀಲೆ: 2009 : ಸಮಾಜ ಪುಸ್ತಕಕಾ ಶಿವಾಜಿ ಬೀದಿ ಧಾರವಾಡ.**